159ನೇ ೦
(32)

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಛಲವಾದಿ . ಟಿ. ನಾರಾಯಣಸ್ವಾಮಿ, ಶ್ರೀ ಎಸ್.ಎಲ್ ಭೋಜೇಗೌಡ, ಶ್ರೀ ಎನ್ ರವಿಕುಮಾರ್ ಹಾಗೂ ಇತರರು ರವರ ನಿಯಮ-330 ರಡಿ ಗಮನ ಸೆಳೆಯುವ ಸೂಚನೆ**

ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ರಾಜ್ಯದ ಎಲ್ಲಾ ಜಿಲ್ಲೆಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ರಸ್ತೆಗಳು ದಿನೇದಿನೇ ಹದಗೆಡುತ್ತಿದ್ದು, ರಸ್ತೆಗಳು ಸಂಪೂರ್ಣ ಹಾಳಾಗಿ ದೊಡ್ಡ ಪ್ರಮಾಣದಲ್ಲಿ ರಸ್ತೆಗುಂಡಿಗಳು ಉಂಟಾಗಿವೆ. ಗ್ರಾಮೀಣ ಭಾಗದ ರಸ್ತೆಗಳು ಜನರ ಜೀವನಾಡಿಯಾಗಿದ್ದು, ಗ್ರಾಮಾಂತರ ಸಾರಿಗೆ ಹಾಗೂ ಗ್ರಾಮಗಳ ಸಂಪರ್ಕಕ್ಕೆ ಮೂಲ ಆಧಾರವಾಗಿವೆ. ಆದರೆ, ಹಾಳಾದ ರಸ್ತೆಗಳ ಕಾರಣ ಗ್ರಾಮೀಣ ಜನರು ತೀವ್ರ ಸಂಕಷ್ಟಕ್ಕೊಳಗಾಗಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಇದರಿಂದ ಅಪಘಾತಗಳು ಹೆಚ್ಚಾಗಿ ಸಾರ್ವಜನಿಕರ ಪ್ರಾಣಹಾನಿಯಾಗುತ್ತಿರುವುದು ಗಂಭೀರ ಆತಂಕದ ವಿಷಯವಾಗಿದೆ. ಇಂತಹ ಗಂಭೀರ ಸಾರ್ವಜನಿಕ ಸಮಸ್ಯೆಯ ಬಗ್ಗೆ ಸರ್ಕಾರ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ. ಹಾಳಾಗಿರುವ ರಸ್ತೆಗಳನ್ನು ತುರ್ತಾಗಿ ದುರಸ್ತಿ ಮಾಡಿ, ಗ್ರಾಮೀಣ ಭಾಗದ ಜನರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ಅಗತ್ಯ ಕ್ರಮಕೈಗೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಿ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇವೆ.

**ನಿಯಮ 330 ರ ಗಮನ ಸೆಳೆಯುವ ಸೂಚನೆಗೆ ಉತ್ತರ.**

ಗ್ರಾಮೀಣ ಪ್ರದೇಶದಲ್ಲಿನ ಸಂಪರ್ಕ ರಸ್ತೆಗಳು ಮಳೆ ಹಾಗೂ ಭಾರಿ ದಟ್ಟನೇ ವಾಹನಗಳ ಸಂಚಾರದಿಂದ ಭಾಗಶ: ರಸ್ತೆಗಳು ಹಾಳಾಗಿದ್ದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಹಾಳಾಗಿರುವ ಹಾಗೂ ಅಭಿವೃದ್ಧಿ ಪಡಿಸಬೇಕಾದ ರಸ್ತೆಗಳನ್ನು ಈ ಕೆಳಕಂಡ ಯೋಜನೆಗಳಡಿ ಆರ್ಥಿಕ ಇಲಾಖೆಯು ಒದಗಿಸುವ ಅನುದಾನದಡಿ ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ.

(1) 3054- ಲಿಂಕ್ ಡಾಕ್ಯೂಮೆಂಟ್ (ಸಿಎಂಜಿಎಸ್‌ವೈ) ಕಾರ್ಯಕ್ರಮ
(2) 3054- ನಮ್ಮ ಗ್ರಾಮ ನಮ್ಮ ರಸ್ತೆ ನಿರ್ವಹಣೆ
(3) 5054- ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ, ಮಳೆ ಪರಿಹಾರ
(4) 5054- ಎಸ್‌ಸಿಪಿ ಮತ್ತು ಟಿಎಸ್‌ಪಿ ಕಾರ್ಯಕ್ರಮ
(5) 5054- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ
(6) ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP)
(7) ಕಲ್ಯಾಣ ಪಥ
(8) ಪಿಎಂ ಜನ್‌ಮನ್ ಮತ್ತು ಪಿಎಂಜಿಎಸ್‌ವೈ ಪ್ರೋತ್ಸಾಹಧನ ಯೋಜನೆ

ಮುಂದುವರೆದು 2023-24 ನೇ ಸಾಲಿನಿಂದ 2026-27 ನೇ ಸಾಲಿನವರೆಗೆ ಮೇಲ್ಕಂಡ ಯೋಜನೆಗಳಡಿ ಒದಗಿಸಲಾದ ಅನುದಾನದಡಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾತಿ, ಹಾಗೂ **ಬಿಡುಗಡೆ ಮಾಡಿದ** ಅನುದಾನದ ವಿವರಗಳನ್ನು **ಅನುಬಂಧ-1 ರಲ್ಲಿ** ಲಗತ್ತಿಸಿದೆ.

ಇದಲ್ಲದೇ, 2024–25ನೇ ಸಾಲಿನ ಬಜೆಟ್‌ನಲ್ಲಿ "ಪ್ರಗತಿ ಪಥ" ಯೋಜನೆಯನ್ನು ಘೋಷಿಸಿದ್ದು, ಗ್ರಾಮೀಣ ರಸ್ತೆ ಜಾಲವನ್ನು ಉನ್ನತೀಕರಿಸುವ ಉದ್ದೇಶದಿಂದ ಯೋಜನೆಯ ಅನುಷ್ಠಾನದ ಪ್ರಕ್ರಿಯನ್ನು ಪ್ರಾರಂಭಿಸಲಾಗಿದೆ.

ಆರ್ಥಿಕ ಇಲಾಖೆಯು ಕಾಲ ಕಾಲಕ್ಕೆ ಒದಗಿಸುವ ಅನುದಾನದ ಲಭ್ಯತೆಯನ್ನಾಧರಿಸಿ ಅಭಿವೃದ್ಧಿ ಪಡಿಸಲು ಬಾಕಿಯಿರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಕ್ರಮವಹಿಸಬೇಕಿದೆ.

**(ಈಶ್ವರ ಬಿ ಖಂಡ್ರೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್
ಸಚಿವರು.

## ಅನುಬಂಧ-1

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಕಾರ್ಯಕ್ರಮ | 2023-24 | | 2024-25 | | 2025-26 | | 2026-27 | |
|---|---|---|---|---|---|---|---|---|---|
| | | ಮಂಜೂರಾತಿ | ಬಿಡುಗಡೆ | ಮಂಜೂರಾತಿ | ಬಿಡುಗಡೆ | ಮಂಜೂರಾತಿ | ಬಿಡುಗಡೆ | ಮಂಜೂರಾತಿ | ಬಿಡುಗಡೆ |
| 01 | 3054- ಸಿಎಂಜಿಎಸ್‌ವೈ | 104.90 | 104.90 | 104.90 | 104.90 | 104.90 | 104.90 | 160.63 | 80.32 |
| 02 | 3054- ರಸ್ತೆಗಳ ನಿರ್ವಹಣೆ | 100.00 | 100.00 | 100.00 | 100.00 | 0.00 | 0.00 | 0.00 | 0.00 |
| 03 | 5054-ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ | 1378.87 | 848.22 | 210.07 | 89.00 | 512.44 | 60.18 | 264.01 | 0.00 |
| 04 | 5054-ಮಳೆ ಪರಿಹಾರ | 0.00 | 0.00 | 1890.00 | 1313.26 | 0.00 | 0.00 | 0.00 | 0.00 |
| 05 | 5054- ಎಸ್‌ಸಿಪಿ ಮತ್ತು ಟಿಎಸ್‌ಪಿ | 153.11 | 153.11 | 239.98 | 239.98 | 262.63 | 40.00 | 0.00 | 0.00 |
| 06 | CMIDP | 0.00 | 0.00 | 0.00 | 0.00 | 2888.39 | 549.53 | 0.00 | 0.00 |
| 07 | ಕಲ್ಯಾಣ ಪಥ | 0.00 | 0.00 | 1000.00 | 553.87 | 0.00 | 0.00 | 0.00 | 0.00 |
| 08 | ಪಿಎಂಜನ್‌ಮನ್ | 0.00 | 0.00 | 69.92 | 37.50 | 0.00 | 0.00 | 0.00 | 0.00 |
| | **ಒಟ್ಟು** | **1736.88** | **1206.23** | **2544.95** | **1847.14** | **3768.36** | **754.61** | **424.64** | **80.32** |

**Pradhan Mantri Gram Sadak Yojana**

| Pradhan Mantri Gram Sadak Yojana | Sanctioned details | | | | Completion details | | | |
|---|---|---|---|---|---|---|---|---|
| | No. of LSBs | No. of Roads | Road Length in Kms | Cost Rs. in Crores | No. of LSBs | No. of Roads | Road Length in Kms | Expenditure Rs.in Crores |
| PMGSY-1 | 36 | 3277 | 16359 | 3339.28 | 36 | 3277 | 16357 | 3756.68 |
| PMGSY-2 | 11 | 314 | 2241.2 | 1042.32 | 11 | 314 | 2218.2 | 1024.98 |
| PMGSY-3 | 115 | 824 | 5600.08 | 3744.77 | 113 | 808 | 5410.28 | 3660.5 |
| **Total** | **162** | **4415** | **24200.28** | **8126.37** | **160** | **4399** | **23985.48** | **8442.16** |